## ಟ್ವೀಟ್ ವಾರ್



**ಅರವಿಂದ ಗುಣಶೇಖರ್** @arvindgunasekar

ಎಲ್ಲರ ಕಣ್ಣು ಈಗ ರಾಜ್ಯಪಾಲರ ಮೇಲೆ ನೆಟ್ಟಿದೆ. ದೇವೇಗೌಡ ಹಾಗೂ ಕುಮಾರಸ್ವಾಮಿ ಅವರ ಮೇಲೆ ಒತ್ತಡ ಹೆಚ್ಚಾಗಿದೆ. ಬಿಜೆಪಿ ಎಷ್ಟೇ ಕಷ್ಟವಾದರೂ ಅವರ ಪಕ್ಷವನ್ನು ಒಡೆಯಲು ಪ್ರಯತ್ನಿಸಲಿದೆ.



**ಬರ್ಖಾ ದತ್** @BDUTT

ಅತಿ ದೊಡ್ಡ ಪಕ್ಷವಾಗಿರುವ ಬಿಜೆಪಿಗೆ ಸರಕಾರ ರಚನೆ ಮಾಡುವ ಅವಕಾಶ ಮೊದಲು ನೀಡಲಾಗುವುದು. ಜೆಡಿಎಸ್‌ಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಟ್ಟು ಬಿಜೆಪಿಗಿಂತ ಲೆಕ್ಕಾಚಾರದಲ್ಲಿ ಮುನ್ನಡೆ ಸಾಧಿಸಲು ಕಾಂಗ್ರೆಸ್ ಪ್ರಯತ್ನಿಸಿದೆ. ಈ ಪ್ರಯತ್ನ ಮೊದಲೇ ಏಕೆ ಮಾಡಲಿಲ್ಲ?



**ಸಂದೀಪ್ ಫುಕನ್** @fewcan

ದೇವೇಗೌಡರ ಪಕ್ಷ ಸರಕಾರ ರಚಿಸಿದವರಂತೆ ಸಂಭ್ರಮಿಸುತ್ತಿದೆ. ಆದರೆ ರಾಜ್ಯಪಾಲರು ಮೊದಲ ದೊಡ್ಡ ಪಕ್ಷಕ್ಕೆ ಬಹುಮತ ಸಾಬೀತುಪಡಿಸುವ ಅವಕಾಶ ನೀಡುವ ಸಾಧ್ಯತೆ ಇದೆ ಎಂಬುದನ್ನು ಮರೆತಿರುವಂತೆ ಕಾಣುತ್ತಿದೆ.

## ಬಿ. ಶ್ರೀರಾಮುಲು

**ಮೊಳಕಾಲ್ಮೂರು ಮತ್ತು ಬಾದಾಮಿಯಲ್ಲಿ ಸ್ಪರ್ಧಿಸಿದ್ದ ಬಿ.ಶ್ರೀರಾಮುಲು ಮೊಳಕಾಲ್ಮೂರಿನಲ್ಲಿ 84,018 ಮತ ಪಡೆದು ಕಾಂಗ್ರೆಸ್ ಅಭ್ಯರ್ಥಿ ಡಾ.ಸುರೇಶ್ ಬಾಬು ವಿರುದ್ಧ 42,045 ಮತಗಳ ಅಂತರದಿಂದ ಗೆದ್ದಿದ್ದಾರೆ. ಬಾದಾಮಿಯಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಸ್ಪರ್ಧಿಸಿ 1696 ಮತಗಳ ಅಂತರದಿಂದ ಸೋಲನುಭವಿಸಿದ್ದಾರೆ.**



## 38,009

ಬೆಂಗಳೂರಿನ ಬಸವನಗುಡಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರವಿಸುಬ್ರಮಣ್ಯ.ಎಲ್.ಎ ಅವರು 38,009 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಆದರೆ, ವಿಶೇಷ ಏನೆಂದರೆ ಪ್ರತಿಸ್ಪರ್ಧಿ ಜೆಡಿಎಸ್‌ನ ಕೆ.ಬಾಗೇಗೌಡ ಪಡೆದ ಮತಗಳು ಸಹ 38,009 ಆಗಿವೆ.

ರಾಹುಲ್ ಮಾತಿಗಿಂತ ಪ್ರಧಾನಿ ಮೋದಿ ಮಾತನ್ನು ಕೇಳಿದ ಜನ | ಕಾಂಗ್ರೆಸ್‌ಗಿಂತ ಬಿಜೆಪಿಗೆ ಲಾಭ | ರಾಹುಲ್ ಮಾತಿಗೆ ಮರುಳಾಗದ ಜನ

# ರಾಹುಲ್ ನಾಯಕತ್ವಕ್ಕೆ ರಾಜ್ಯದಲ್ಲಿಲ್ಲ ಸಮ್ಮತಿ

**ರಂಜಿತ್ ಎಚ್ ಅಶ್ವತ್ಥ** ಬೆಂಗಳೂರು

ಕಳೆದ ಐದು ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಅಂತಿಮ ಅತಿದೊಡ್ಡ ರಾಜ್ಯದ ಅಧಿಕಾರ ಚುಕ್ಕಾಣಿ ಉಳಿಸಿಕೊಳ್ಳಲು ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಎಲ್ಲಿಲ್ಲದ ಪ್ರಚಾರ ಕಾರ್ಯ ನಡೆಸಿದ್ದರು. ಆದರೆ, ರಾಹುಲ್ ಗಾಂಧಿ ಅವರ ಪ್ರಚಾರ ಕಾಂಗ್ರೆಸ್‌ಗೆ ಸಕಾರಾತ್ಮಕ ಪರಿಣಾಮಕ್ಕಿಂತ ನಕಾರಾತ್ಮಕವಾಗಿದೆ ಎನ್ನುವ ಅನುಮಾನ ದಟ್ಟವಾಗಿದೆ.

2014ರ ಲೋಕಸಭಾ ಚುನಾವಣೆಯಿಂದ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ದೇಶದಲ್ಲಿ ನಡೆದ ವಿಧಾನಸಭಾ ಚುನಾವಣೆ ಎದುರಿಸಿದರೂ, ಪಂಜಾಬ್ ಹಾಗೂ ಪುದುಚೇರಿಯಲ್ಲಿ ಮಾತ್ರ ಅಧಿಕಾರದ ಗದ್ದುಗೆ ಹಿಡಿಯುವಲ್ಲಿ ಕಾಂಗ್ರೆಸ್ ಯಶ ಕಂಡಿತ್ತು. ಇನ್ನು ಗುಜರಾತ್, ಮೇಘಾಲಯದಲ್ಲಿ ಉತ್ತಮ ಸೀಟ್‌ಗಳನ್ನು ಗೆಲ್ಲುವಲ್ಲಿ ಯಶ ಕಂಡರೂ, ಅಧಿಕಾರಕ್ಕೆ ತರುವಲ್ಲಿ ರಾಹುಲ್ ಗಾಂಧಿ ಯಶಸ್ವಿಯಾಗಿರಲಿಲ್ಲ. ರಾಹುಲ್ ಹೋದ ಕಡೆಯಲ್ಲಿ ಕಾಂಗ್ರೆಸ್ ಪೂರಕ ವಾತಾವರಣ ಸೃಷ್ಟಿಯಾಗುವ ಬದಲು, ಬಿಜೆಪಿಗೆ ಮತಗಳು ಬರುತ್ತಿವೆ ಎನ್ನುವ ಮಾತುಗಳು ಕೇಳಿಬಂದಿತ್ತು. ಅದೀಗ ರಾಜ್ಯ ಚುನಾವಣೆಗೂ ಹೊರತಾಗಿಲ್ಲ.

ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಉತ್ತಮ ವಾತಾವರಣವಿದ್ದು, ಇಲ್ಲಿ ರಾಹುಲ್ ನೇತೃತ್ವದಲ್ಲಿ ಗೆಲ್ಲುವ ಮೂಲಕ ಮುಂದಿನ ಲೋಕಸಭಾ ಚುನಾವಣೆಗೆ ರಾಹುಲ್ ಅವರನ್ನು ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿಸುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ಇತ್ತು. ಆದರೆ, ರಾಹುಲ್ ಸಾಲು ಸಾಲು ರ್‍ಯಾಲಿಗಳನ್ನು ನಡೆಸಿದರೂ, ಜನ ಕಾಂಗ್ರೆಸ್ ಅನ್ನು ತಿರಸ್ಕರಿಸುವ ಮೂಲಕ ರಾಹುಲ್ ನಾಯಕತ್ವಕ್ಕೆ ಸಮ್ಮತಿಯಿಲ್ಲ ಎನ್ನುವ ಸ್ಪಷ್ಟ ಅಭಿಪ್ರಾಯ ಹೊರಹಾಕಿದ್ದಾರೆ.

**ಭಾಷಣಕ್ಕೂ ಕಿಮ್ಮತ್ತಿರಲಿಲ್ಲ:** ರಾಹುಲ್ ಗಾಂಧಿ ಹೋದ ಕಡೆಯಲ್ಲ ಕೇಂದ್ರ ಸರಕಾರ, ಪ್ರಧಾನಿ ಮೋದಿ ಅವರನ್ನು ಟೀಕಿಸುತ್ತ ಭಾರಿ ಸುದ್ದಿಯಾಗುತ್ತಿದ್ದರು. ಬೆಂಗಳೂರು ಹಾಗೂ ಹಳೇ ಮೈಸೂರು ಭಾಗವನ್ನು ಹೊರೆತುಪಡಿಸಿ, ಇನ್ನುಳಿದ ಭಾಗದಲ್ಲಿ ಜನರನ್ನು ಸೇರಿಸುವಲ್ಲಿಯೂ ರಾಜ್ಯ ನಾಯಕರು ಒಂದು ಹಂತದಲ್ಲಿ ಯಶಸ್ವಿಯಾಗಿದ್ದರು. ಆದರೆ, ಸಮಾವೇಶಕ್ಕೆ ಆಗಮಿಸಿದ್ದ ಲಕ್ಷಾಂತರ ಜನರು, ತಮ್ಮ ಮತವನ್ನು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕುವಂತೆ ಮಾಡುವಲ್ಲಿ ರಾಹುಲ್ ಭಾಷಣ ವರ್ಕ್ ಔಟ್ ಆಗಿಲ್ಲ ಎನ್ನುವುದು ಸತ್ಯ.

ಇದರೊಂದಿಗೆ ರಾಹುಲ್ ಗಾಂಧಿ ಅವರ 40ಕ್ಕೂ ಹೆಚ್ಚು ಬಹಿರಂಗ ಸಮಾವೇಶಗಳನ್ನು ಆಯೋಜಿಸಲಾಗಿತ್ತು. ಆದರೆ ಸಮಾವೇಶ ನಡೆದ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸೋಲು ಅನುಭವಿಸಿದ್ದರೆ, ಇನ್ನು ಕೆಲ ಕ್ಷೇತ್ರಗಳಲ್ಲಿ ಕೂದಲೆಳೆ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ಈ ಗೆಲುವು ರಾಹುಲ್ ಗಾಂಧಿ ಎನ್ನುವುದಕ್ಕಿಂತ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸ್ಥಳೀಯ ನಾಯಕರಿಂದ ಮತಗಳು ಬಂದಿವೆ ಎನ್ನುವುದು ಸ್ಥಳೀಯ ಭಾಗದಲ್ಲಿ ಕೇಳಿಬರುತ್ತಿರುವ ಮಾತುಗಳಾಗಿವೆ.

ರಾಹುಲ್ ಭಾಷಣಕ್ಕಿಂತ ಹೆಚ್ಚಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾಷಣಕ್ಕೆ ಸಾರ್ವಜನಿಕರು ಹೆಚ್ಚು ಗಮನ ಹರಿಸುತ್ತಿದ್ದರು, ಎನ್ನುವ ಮಾತುಗಳು ಸುಳ್ಳಲ್ಲ. ಇದನ್ನು ಅರಿತ ಕಾಂಗ್ರೆಸ್ ಮುಖಂಡರು, ರಾಹುಲ್ ಗಾಂಧಿ ಭಾಷಣದ ಬಳಿಕ ಸಿದ್ದರಾಮಯ್ಯ ಅವರಿಗೆ ಮಾತನಾಡಲು ಅವಕಾಶ ನೀಡುತ್ತಿದ್ದರು. ಈ ಮೂಲಕ ರಾಹುಲ್ ಭಾಷಣಕ್ಕೆ ಜನ ನಿಲ್ಲುವಂತೆ ಮಾಡಲಾಗಿತ್ತು. ಈ ಎಲ್ಲ ಅಂಶಗಳನ್ನು ನೋಡಿದರೆ, ರಾಜ್ಯದಲ್ಲಿ ರಾಹುಲ್ ಹವಾ ವರ್ಕ್ ಔಟ್ ಆಗಿಲ್ಲ ಎನ್ನುವುದು ಸ್ಪಷ್ಟ.



ರಾಹುಲ್ ಬೆಂಗಳೂರಿನಲ್ಲಿ ರೋಡ್ ಶೋ ನಡೆಸಿದ ಸಂದರ್ಭ.

### ಬೆಂಗಳೂರಿನಲ್ಲಿ ನೀರಸ ಪ್ರತಿಕ್ರಿಯೆ

**ಚುನಾವಣೆಗೆ ಎರಡು ದಿನ ಮೊದಲು ರಾಹುಲ್ ಬೆಂಗಳೂರಿನಲ್ಲಿ ಮೂರು ದಿನಗಳ ಕಾಲ ರ್‍ಯಾಲಿ, ಸಮಾವೇಶ, ರೋಡ್ ಶೋಗಳನ್ನು ನಡೆಸಿದ್ದರು. ಜಯನಗರ, ಬಿಟಿಎಂ ಲೇಔಟ್, ಬಸವನಗುಡಿ, ಸಿ.ವಿ ರಾಮನ್ ನಗರ ಸೇರಿದಂತೆ 10ಕ್ಕೂ ಹೆಚ್ಚು ಕ್ಷೇತ್ರದಲ್ಲಿ ರೋಡ್ ಶೋ ನಡೆಸಿದ್ದರು. ಆದರೆ, ಈ ಯಾವ ಭಾಗದಲ್ಲಿಯೂ ರಾಹುಲ್ ಅವರನ್ನು ಸ್ವಾಗತಿಸಲು ಅಥವಾ ಅವರು ಕೈಬೀಸಿದರೆ, ವಾಪಸ್ ಕೈಬೀಸಲು ಜನರಿರಲಿಲ್ಲ. ಬಿಟಿಎಂ ಲೇಔಟ್, ಶಿವಾಜಿನಗರ ಹೊರತುಪಡಿಸಿ, ಇನ್ನುಳಿದ ಎಲ್ಲ ಕ್ಷೇತ್ರಗಳಲ್ಲಿಯೂ ಕಾಂಗ್ರೆಸ್ ಮಕಾಡೆ ಮಲಗಿದೆ.**

### 60ಕ್ಕೂ ಹೆಚ್ಚು ರ್‍ಯಾಲಿ ನಡೆಸಿದ ರಾಹುಲ್

**ಚುನಾವಣೆಗೆ ಎರಡು ತಿಂಗಳ ಮೊದಲೇ, ಜನಾಶೀರ್ವಾದ ಕಾರ್ಯಕ್ರಮದ ಹೆಸರಲ್ಲಿ ರಾಹುಲ್ ಗಾಂಧಿ ರಾಜ್ಯದ 32 ಜಿಲ್ಲೆಗಳಲ್ಲಿ 60ಕ್ಕೂ ಹೆಚ್ಚು ರ್‍ಯಾಲಿಗಳನ್ನು ನಡೆಸಿ, ಕಾಂಗ್ರೆಸನ್ನು ಅಧಿಕಾರಕ್ಕೆ ತರಬೇಕೆಂದು ಹೋರಾಡಿದ್ದರು. ಈ ಬಾರಿಯಾದರೂ ಗೆಲ್ಲುವ ಮೂಲಕ ಕರ್ನಾಟಕದಲ್ಲಿ 'ರಾಹುಲ್ ಹವಾ' ಇದೆ ಎನ್ನುವುದನ್ನು ತೋರಿಸಲು ಪ್ರಯತ್ನಿಸಿದ್ದರು. ಅದಕ್ಕಾಗಿ ರಾಜ್ಯ ಕಾಂಗ್ರೆಸ್ ನಾಯಕರು ಅವಿರತ ಪ್ರಯತ್ನ ನಡೆಸಿದರೂ, ಅಂತಿಮ ಕ್ಷಣದ 'ಮೋದಿ ವೇವ್' ಮುಂದೆ ರಾಹುಲ್ ಗಾಂಧಿ ಅವರ ಪ್ರಚಾರಕ್ಕೆ ಜನ ಹೆಚ್ಚು ಮನ್ನಣೆ ನೀಡಿಲ್ಲ ಎನ್ನುವುದು ಫಲಿತಾಂಶದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದೆ.**

## ವಿವಿಧ

### ಸರಕಾರ ರಚಿಸುವವರಿಗೆ ಬೆಂಬಲ

**ಹಾವೇರಿ:** ರಾಜ್ಯದಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಿರುವುದರಿಂದ ಸರಕಾರ ರಚನೆಗೆ ಪಕ್ಷೇತರರ ಬೆಂಬಲ ಬೇಕಾಗಬಹುದು. ಈಗಾಗಲೇ ನನ್ನನ್ನು ಎಲ್ಲ ಪಕ್ಷದ ನಾಯಕರುಗಳು ಸಂಪರ್ಕ ಮಾಡಿದ್ದಾರೆ. ತಮಗೆ ಬೆಂಬಲ ಕೊಡುವಂತೆ ಕೇಳಿದ್ದಾರೆ ಎಂದು ರಾಣಿಬೆನ್ನೂರು ಕ್ಷೇತ್ರದ ವಿಜೇತ ಅಭ್ಯರ್ಥಿ ಆರ್.ಶಂಕರ ಹೇಳಿದರು. ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಯಾವುದೇ ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ಸಿಗದೇ, ಅತಂತ್ರ ಸ್ಥಿತಿ ಬಂದಿದೆ. ಹಾಗಾಗಿ ಪಕ್ಷೇತರರ ಬೆಂಬಲ ಬಯಸಿರುವ ರಾಜಕೀಯ ಪಕ್ಷಗಳ ಮುಖಂಡರು ನನ್ನನ್ನು ಸಂಪರ್ಕಿಸಿದ್ದಾರೆ. ಸರಕಾರ ರಚನೆಗೆ ಬೆಂಬಲ ಕೊಡುವಂತೆ ಕೇಳಿದ್ದಾರೆ. ಬೆಂಬಲ ನೀಡುವುದು ನನ್ನ ಧರ್ಮ, ಕ್ಷೇತ್ರದ ಅಭಿವೃದ್ಧಿಗಾಗಿ ಯಾರಿಗಾದರೂ ಬೆಂಬಲ ನೀಡಲೇಬೇಕು. ಆದರೆ, ಕ್ಷೇತ್ರದ ಅಭಿವೃದ್ಧಿಗೆ ಯಾರು ಹೆಚ್ಚಿನ ಸಹಕಾರ ನೀಡುತ್ತಾರೆ, ಯಾರು ಸರಕಾರ ರಚನೆಗೆ ಮುಂದಾಗುತ್ತಾರೆ ಎಂಬುದನ್ನು ನೋಡಿಕೊಂಡು ನನ್ನ ಬೆಂಬಲ ನೀಡುತ್ತೇನೆ ಎಂದರು.




ಕ್ಷಣ ಕ್ಷಣದ ಸುದ್ದಿಗಾಗಿ
ವಿಶ್ವವಾಣಿ timely
ಗೂಗಲ್ ಪ್ಲೇಸ್ಟೋರ್‌ನಿಂದ ಡೌನ್‌ಲೋಡ್ ಮಾಡಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿ

# ಜೆಡಿಎಸ್ ಅನ್ನು ಕೈಹಿಡಿದು ಗೆಲ್ಲಿಸಿದ್ದು ಯಾರು?

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಮೀನುಗಾರರು, ನೇಕಾರರು, ಸ್ತ್ರೀ ಶಕ್ತಿ ಸಂಘಗಳ ಸಾಲಮನ್ನಾ, ಸಹಕಾರ ಸಂಘಗಳು ಮತ್ತು ರಾಷ್ಟ್ರೀಯ ಬ್ಯಾಂಕ್‌ಗಳಿಂದ ರೈತರು ಪಡೆದ ಸಂಪೂರ್ಣ ಸಾಲ, ಬಡ್ಡಿ ಮನ್ನಾ ಮಾಡುವುದಾಗಿ ಜೆಡಿಎಸ್ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ್ದರಿಂದ ಪಕ್ಷಕ್ಕೆ ಬಹಳಷ್ಟು ಅನುಕೂಲವಾಯಿತು. ಈ ಘೋಷಣೆಯೇ ಪಕ್ಷಕ್ಕೆ ಹೆಚ್ಚು ಮತಗಳನ್ನು ತಂದಿದೆ ಎಂದರೆ ತಪ್ಪೇನಲ್ಲ. ಅಲ್ಲದೇ ಹಿರಿಯ ನಾಗರಿಕರಿಗೆ 6 ಸಾವಿರ ರು. ಮಾಸಾಶನ, ಗರ್ಭಿಣಿಯರಿಗೆ ಒಟ್ಟು 36 ಸಾವಿರ ರು., ಹಳ್ಳಿಗಳ ಯುವಕರಿಗೆ ಸಸಿ ಬೆಳೆಸುವ ಉದ್ಯೋಗ ನೀಡುವುದು, ಭ್ರಷ್ಟಾಚಾರ ರಹಿತ ಆಡಳಿತ ಸರಕಾರಿ ಶಾಲೆಗಳನ್ನು ಬಲಪಡಿಸುವುದಾಗಿ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದು, ಮತ ಗಳಿಸಲು ಸಹಾಯಕವಾಯಿತು.

ಕಾಂಗ್ರೆಸ್ ಮತ್ತು ಬಿಜೆಪಿಗಿಂತ ಮೊದಲೇ 126 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಜೆಡಿಎಸ್ ಬಿಡುಗಡೆಗೊಳಿಸಿದ್ದು, ಪಕ್ಷಕ್ಕೆ ಪ್ಲಸ್ ಪಾಯಿಂಟ್ ಆಯಿತು. ಇದರಿಂದ ಅಭ್ಯರ್ಥಿಗಳು ಪ್ರಚಾರ ಮಾಡಲು ಹೆಚ್ಚು ಸಮಯ ಸಿಕ್ಕಂತಾಯಿತು. ಆಗ ಟಿಕೆಟ್ ವಂಚಿತರಿಂದ ಉಂಟಾದ ಬಂಡಾಯ ಶಮನಕ್ಕೆ ವರಿಷ್ಠರು ಸಾಕಷ್ಟು ಪ್ರಯತ್ನಪಟ್ಟು ಅದರಲ್ಲಿಯೂ ಯಶಸ್ವಿಯಾದರು. ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮಾಯಾವತಿ ನೇತೃತ್ವದ ಬಹುಜನ ಸಮಾಜ ಪಕ್ಷದೊಂದಿಗೆ ಚುನಾವಣಾ ಪೂರ್ವ-ಮೈತ್ರಿ ಮಾಡಿಕೊಂಡಿದ್ದರಿಂದ ದಲಿತರ ಮತಗಳನ್ನು ಪಡೆಯುವಲ್ಲಿ ಜೆಡಿಎಸ್ ಯಶಸ್ವಿಯಾಯಿತು. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಮತ್ತು ಪಕ್ಷದ ರಾಜ್ಯಾಧ್ಯಕ್ಷ ಎಚ್. ಡಿ.ಕುಮಾರಸ್ವಾಮಿ ಅವರು ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಪ್ರಚಾರ ನಡೆಸಿ ಅಭ್ಯರ್ಥಿಗಳಿಗೆ ಹುರುಪು ತುಂಬಿದ್ದೂ ನೆರವಿಗೆ ಬಂತು.

**ಪಕ್ಷಕ್ಕೆ ಮಾರಕವಾದದ್ದೇನು?:** ಪಕ್ಷ ಬಿಡುಗಡೆಗೊಳಿಸಿದ ಮೊದಲ ಪಟ್ಟಿಯನ್ನು ಹೇಗೋ ಅರಗಿಸಿಕೊಂಡರೂ, ಎರಡನೇ ಪಟ್ಟಿ ಬಿಡುಗಡೆಗೊಳಿಸಿದ ನಂತರ ಬಂಡಾಯ ಹೆಚ್ಚಾಗಿ ಇದರ ಕಾವು ಸರಿಯಾಗಿಯೇ ಪಕ್ಷಕ್ಕೆ ತಟ್ಟಿತು. ಇದು ಪ್ರತೀಕೂಲ ಪರಿಣಾಮ ಬೀರಿತು. ಕೊನೆ ಕೊನೆಗೆ ಎಂತಹ ಪರಿಸ್ಥಿತಿ ಉದ್ಭವಿಸಿತೆಂದರೆ ಅಂತಿಮ ಪಟ್ಟಿಯನ್ನು ಬಿಡುಗಡೆಗೊಳಿಸದೇ ನೇರವಾಗಿ ಅಭ್ಯರ್ಥಿಗಳಿಗೇ 'ಬಿ' ಫಾರಂ ನೀಡಲಾಯಿತು. ಆದರೂ ಇಲ್ಲೂ ಎಡವಟ್ಟಾಗಿತ್ತು. ಕೆಲವರಿಗೆ 'ಬಿ' ಫಾರಂ ನೀಡಿದ್ದರೂ, ಕೊನೆಗೆ 'ಸಿ' ಫಾರಂ ನೀಡಿ ನಾಮಪತ್ರ ಸಲ್ಲಿಸಲು ಸೂಚಿಸಲಾಯಿತು. ಇದೂ ಗೊಂದಲಕ್ಕೆ ಕಾರಣವಾಗಿ ಕೆಲ ಕ್ಷೇತ್ರಗಳಲ್ಲಿ ಜೆಡಿಎಸ್ ಒಂದಷ್ಟು ಹಿನ್ನಡೆ ಅನುಭವಿಸುವಂತಾಯಿತು. ಈ ಎಲ್ಲದರ ಪರಿಣಾಮವಾಗಿ ಮೊದಮೊದಲು ಗೆಲ್ಲುವ ಲಕ್ಷಣಗಳೇ ಇರದ ಜೆಡಿಎಸ್ ಕ್ರಮೇಣ ಹಿಡಿತ ಸಾಧಿಸಿತು.

# ಕಾಂಗ್ರೆಸ್ ಹಿಂಬಾಗಿಲಿನಿಂದ ಅಧಿಕಾರಕ್ಕೆ ಯತ್ನಿಸುತ್ತಿದೆ

**ಬೆಂಗಳೂರು:** ರಾಜ್ಯದ ಜನತೆ ಸಿದ್ದರಾಮಯ್ಯ ಸರಕಾರವನ್ನು ತಿರಸ್ಕರಿಸಿ, ಬಿಜೆಪಿಗೆ ಬಹುಮತ ನೀಡಿದ್ದಾರೆ. ಆದರೆ, ಕಾಂಗ್ರೆಸ್‌ನವರು ಹಿಂಬಾಗಿಲಿನಿಂದ ಅಧಿಕಾರ ಹಿಡಿಯಲು ಹವಣಿಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ಎಸ್.ಯಡಿಯೂರಪ್ಪ ಕಾಂಗ್ರೆಸ್ ನಡೆಯನ್ನು ಟೀಕಿಸಿದರು. ಮಲ್ಲೇಶ್ವರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈತ್ರಿ ಕುರಿತು ಪಕ್ಷದ ವರಿಷ್ಠರ ಜತೆ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಕ್ಷೇತ್ರ ಚಾಮುಂಡೇಶ್ವರಿಯಲ್ಲೇ ಹೀನಾಯವಾಗಿ ಸೋತಿದ್ದಾರೆ. ರಾಜ್ಯದ ಜನತೆ ಬದಲಾವಣೆ ಬಯಸಿದ್ದು, ಕಾಂಗ್ರೆಸ್ ಮುಕ್ತ ಕರ್ನಾಟಕವನ್ನು ಬೆಂಬಲಿಸಿದ್ದಾರೆ. ಆದರೆ ಕಾಂಗ್ರೆಸ್‌ನವರು ಜೆಡಿಎಸ್‌ನೊಂದಿಗೆ ಅಧಿಕಾರದ ಗದ್ದುಗೆ ಹಿಡಿಯಲು ಮುಂದಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿಗೆ ಬೆಂಬಲ ಸೂಚಿಸಿದ್ದಕ್ಕೆ ನಾಡಿನ ಜನತೆಗೆ ಧನ್ಯವಾದ ಅರ್ಪಿಸುತ್ತೇನೆ. ಕಾಂಗ್ರೆಸ್ ವಿರೋಧಿ ಅಲೆಯಿಂದಾಗಿ, ಜೆಡಿಎಸ್ ಗಣನೀಯ ಸ್ಥಾನ ಗಳಿಸಿದೆ ಎಂದರು.



ಉಡುಪಿ ಕ್ಷೇತ್ರದ ಜನತೆಯ ಆಶೀರ್ವಾದ ಹಾಗೂ ಕಾರ್ಯಕರ್ತರ ಪರಿಶ್ರಮದ ಫಲವಾಗಿ ರಾಜ್ಯದ ನಂಬರ್ ಒನ್ ಸಚಿವನೆಂದು ಹೇಳಿಕೊಂಡಿದ್ದ ಪ್ರಮೋದ್ ಮಧ್ವರಾಜ್ ವಿರುದ್ಧ ಗೆಲುವು ಸಾಧಿಸಿದ್ದೇನೆ. ಇದರ ಸಂಪೂರ್ಣ ಶ್ರೇಯಸ್ಸನ್ನು ಕಾರ್ಯಕರ್ತರಿಗೆ ಸಲ್ಲಿಸುತ್ತೇನೆ.

**-ರಘುಪತಿ ಭಟ್** ಉಡುಪಿ ಕ್ಷೇತ್ರದ ವಿಜೇತ ಅಭ್ಯರ್ಥಿ



ಕಳೆದ ಬಾರಿ ಶಾಸಕನಾಗಿ ಕೆಲಸ ಮಾಡಿದ ಅಭಿವೃದ್ಧಿ ಚಟುವಟಿಕೆಗಳಿಗೆ ಮತ್ತು ಕಾರ್ಯಕರ್ತರ ಪರಿಶ್ರಮಕ್ಕೆ ಸಿಕ್ಕ ಗೆಲುವು ಇದು. ಹಿಂದುತ್ವ ಮತ್ತು ಅಭಿವೃದ್ಧಿ ಕಾರ್ಯ ಮುಂದುವರಿಸುವಂತೆ ಕ್ಷೇತ್ರದ ಜನ ನನಗೆ ಮತ್ತೆ ಆಶೀರ್ವಾದ ಮಾಡಿದ್ದಾರೆ. ಜನರ ನಂಬಿಕೆ, ವಿಶ್ವಾಸ ಉಳಿಸಿ, ಕ್ಷೇತ್ರವನ್ನು ಅಭಿವೃದ್ಧಿ ಮಾಡುತ್ತೇನೆ.

**-ಸುನೀಲ್ ಕುಮಾರ್** ಕಾರ್ಕಳ ಕ್ಷೇತ್ರದ ವಿಜೇತ ಅಭ್ಯರ್ಥಿ



ಪ್ರಧಾನಿ ನರೇಂದ್ರ ಮೋದಿ, ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಹಾಗೂ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಜಾರಿಗೆ ತಂದ ಕಾರ್ಯಕ್ರಮಗಳನ್ನು ನೋಡಿ ಜನ ಮತ್ತೆ ಬಿಜೆಪಿಗೆ ಮತ ನೀಡಿದ್ದಾರೆ. ವಿರೋಧಿಗಳು ನನ್ನ ವಿರುದ್ಧ ಮಾಡಿರುವುದು ಪ್ರಚಾರ ಅಲ್ಲ, ಅಪಪ್ರಚಾರ ಎಂಬುದು ಜನರಿಗೆ ಗೊತ್ತಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರ ಸೋಲಿಗೆ ಅವರ ಆಡಳಿತ ವೈಫಲ್ಯವೇ ಕಾರಣ.

**-ಹಾಲಾಡಿ ಶ್ರೀನಿವಾಸ ಶೆಟ್ಟಿ** ಕುಂದಾಪುರ ಕ್ಷೇತ್ರದ ವಿಜೇತ ಅಭ್ಯರ್ಥಿ



ಗೆಲುವಿನ ಹಿಂದೆ ಪಕ್ಷದ ಕಾರ್ಯಕರ್ತರ ಪರಿಶ್ರಮ, ತ್ಯಾಗ ಬಹಳಷ್ಟಿದೆ. ಕಾರ್ಯತಂತ್ರ ರೂಪಿಸಿದ ಪರಿಣಾಮ ಬಿಜೆಪಿ ಗೆದ್ದಿದೆ. ಬಹಳ ಅಂತರದ ಗೆಲುವು ಸಾಧಿಸುವ ಮೂಲಕ ದಾಖಲೆ ನಿರ್ಮಿಸಿದ್ದೇವೆ. ಕ್ಷೇತ್ರದ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ.

**-ಲಾಲಾಜಿ ಆರ್.ಮೆಂಡನ್** ಕಾಪು ಕ್ಷೇತ್ರದ ವಿಜೇತ ಅಭ್ಯರ್ಥಿ



ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಿಯ ಆಶೀರ್ವಾದದಿಂದ ಬಹಳ ಅಂತರದಿಂದ ಗೆಲುವು ಸಾಧಿಸಿದ್ದೇನೆ. ಯಾವುದೇ ಪಕ್ಷಭೇದ ಇಲ್ಲದೆ ಬೈಂದೂರಿನ ಸರ್ವಾಂಗೀಣ ಅಭಿವೃದ್ಧಿಗೆ ಯತ್ನಿಸುತ್ತೇನೆ. ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಮೊದಲ ಆದ್ಯತೆ ನೀಡಲಾಗುವುದು.

**-ಸುಕುಮಾರ್ ಶೆಟ್ಟಿ** ಬೈಂದೂರು ಕ್ಷೇತ್ರದ ವಿಜೇತ ಅಭ್ಯರ್ಥಿ



ಈ ಬಾರಿಯ ಚುನಾವಣೆಯಲ್ಲಿ ನಿರಾಸದಾಯಕ ಫಲಿತಾಂಶ ಬಂದಿದೆ. ನಾವು ಜನಾದೇಶ ಒಪ್ಪಿಕೊಳ್ಳುತ್ತೇವೆ. ಹೀಗೆ ಏಕೆ ಆಯಿತು ಎಂಬುದರ ಬಗ್ಗೆ ಆತ್ಮ ವಿಮರ್ಶೆ ಮಾಡಿಕೊಳ್ಳುತ್ತೇವೆ. ಅಭಿವೃದ್ಧಿ, ಜನಪರ ಮತ್ತು ಭ್ರಷ್ಟಚಾರ ರಹಿತ ಆಡಳಿತವನ್ನು ಕಾಂಗ್ರೆಸ್ ನೀಡಿದೆ. ಆದರೂ ಜನರ ಯಾಕೆ ತಿರಸ್ಕರಿಸಿದ್ದಾರೆಂಬುದು ಗೊತ್ತಿಲ್ಲ.

**-ಜನಾರ್ದನ ತೋನ್ಸೆ** ಉಡುಪಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ



ತುಮಕೂರು ಗ್ರಾಮಾಂತರದಲ್ಲಿ ಕಳೆದ ಬಾರಿ ಶಾಸಕರಾಗಿದ್ದ ಸುರೇಶ್‌ಗೌಡ ಕೆಲವು ಕಡೆ ಮಾತ್ರ ಅಭಿವೃದ್ಧಿ ಮಾಡಿ, ಉಳಿದೆಡೆ ತಿರುಗಿಯೂ ನೋಡಿಲ್ಲ. ಅನೇಕ ಸಮಸ್ಯೆಗಳಿಂದ ಗ್ರಾಮಾಂತರ ಕ್ಷೇತ್ರ ನರಳುತ್ತಿದೆ. ಸಮರ್ಪಕವಾಗಿ ಗ್ರಾಮಾಂತರದ ಅಭಿವೃದ್ಧಿಗೆ ಶ್ರಮಿಸಲಾಗುವುದು.

**- ಗೌರಿಶಂಕರ್** ತುಮಕೂರು ಗ್ರಾಮಾಂತರ ಕ್ಷೇತ್ರದ ವಿಜೇತ ಅಭ್ಯರ್ಥಿ

## ಗಣಿ ನಾಡಲ್ಲಿ ಕಾಂಗ್ರೆಸ್ ಜಯಭೇರಿ

**ಬಳ್ಳಾರಿ:** ಗಣಿನಾಡು ಬಳ್ಳಾರಿ ಜಿಲ್ಲೆಯಲ್ಲಿ ಈ ಬಾರಿ ಗಣಿಧಣಿಗಳ ಕಸರತ್ತಿಗೆ ಕಿಮ್ಮತ್ತು ಇಲ್ಲದಂತಾಗಿದೆ. ಜಿಲ್ಲೆಯ 9 ವಿಧಾನ ಸಭಾ ಕ್ಷೇತ್ರಗಳ ಪೈಕಿ 6 ಕ್ಷೇತ್ರಗಳನ್ನು ಕಾಂಗ್ರೆಸ್ ವಶಕ್ಕೆ ಪಡೆದಿದ್ದರೆ, ಇನ್ನುಳಿದ ಮೂರು ಕ್ಷೇತ್ರಗಳನ್ನು ಮಾತ್ರ ಬಿಜೆಪಿ ತನ್ನದಾಗಿಸಿಕೊಂಡಿದೆ. ಬಳ್ಳಾರಿ ನಗರ, ಸಿರುಗುಪ್ಪ ಮತ್ತು ಕೂಡ್ಲಿಗಿ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯಗಳಿಸಿದ್ದು, ಅದು ಆಯಾ ಕ್ಷೇತ್ರಗಳಲ್ಲಿ ಆಯಾ ಅಭ್ಯರ್ಥಿಗಳ ವೈಯಕ್ತಿಕ ವರ್ಚಸ್ಸಿನಿಂದ ಎಂದೇ ಹೇಳಬಹುದು. ಉಳಿದ ಬಳ್ಳಾರಿ ಗ್ರಾಮಾಂತರ, ಸಂಡೂರು, ಕಂಪ್ಲಿ, ವಿಜಯನಗರ (ಹೊಸಪೇಟೆ), ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ಕ್ಷೇತ್ರಗಳನ್ನು ಕಾಂಗ್ರೆಸ್ ತನ್ನ ವಶಕ್ಕೆ ಪಡೆದುಕೊಂಡಿದೆ. ಲಾಡ್ **ಸಹೋದರರನ್ನು ತಿರಸ್ಕರಿಸಿದ ಮತದಾರರು:** ನಗರ ಕ್ಷೇತ್ರದ ಶಾಸಕರಾಗಿದ್ದ ಅನಿಲ್ ಎಚ್. ಲಾಡ್ ಅವರು ಜನ ಸಾಮಾನ್ಯರಿಗೆ ಸಿಗದಿರುವುದು ಅಲ್ಲದೆ, ಬಳ್ಳಾರಿ ಭೇಟಿ ನೀಡದಿರುವ ಹಿನ್ನೆಲೆಯಲ್ಲಿ ನಗರದ ಜನತೆ ಅನಿಲ್ ಲಾಡ್ ಅವರನ್ನು ತಿರಸ್ಕರಿಸಿದರೆ, ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸಂತೋಷ್ ಲಾಡ್ ಅವರನ್ನು ಬಳ್ಳಾರಿಯಲ್ಲಿ ಕಾಂಗ್ರೆಸ್‌ನವರೇ ಸಚಿವರ ವಿರುದ್ಧ ಗುಡಿಗಿದ್ದರು. ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಈ ಬಾರಿ ಲಾಡ್ ಸಹೋದರರನ್ನು ದೂರವಿಡಬೇಕು ಎಂಬುದು ಸ್ಥಳೀಯ ಮತದಾರರ ನಿರ್ಧಾರವಾಗಿತ್ತು. ಕಾಕತಾಳಿಯ ವೆಂಬಂತೆ ಸಂತೋಷ ಲಾಡ್ ಮತ್ತು ಅನಿಲ್ ಲಾಡ್ ಇಬ್ಬರು ಸಹೋದರರು ಈ ಬಾರಿಯ ಚುನಾವಣೆಯಲ್ಲಿ ಸೋಲುಂಡಿದ್ದಾರೆ.

# ಮೋದಿ ಹೊಡೆತಕ್ಕೆ ಕೈ ಪಾಳೆಯ ಅಲ್ಲೋಲ ಕಲ್ಲೋಲ

**ರತ್ನ ಎಸ್.ಗೌಡ** ಬೆಂಗಳೂರು

ರಾಜ್ಯದಲ್ಲಿ ಮೋದಿ ಅಲೆ ಇಲ್ಲವೇ ಇಲ್ಲ ಎಂದಿದ್ದ ಕಾಂಗ್ರೆಸ್ ಅದೇ ಅಲೆಯಲ್ಲಿ ಕೊಚ್ಚಿ ಹೋಗಿದೆ. ಪ್ರಧಾನಿ ನರೇಂದ್ರ ಮೋದಿ ಎಲ್ಲೆಲ್ಲಿ ರ್‍ಯಾಲಿ ನಡೆಸಿದ್ದರೋ ಅಲ್ಲೆಲ್ಲ ಕಮಲ ಅರಳುವ ಮೂಲಕ 'ಕೈ'ನ ಅಸ್ತಿತ್ವವನ್ನೇ ಅಳಿಸಿ ಹಾಕಿದ್ದಾರೆ.

ಮೋದಿ ಆಗಮನಕ್ಕೂ ಮುನ್ನ ಬಿಜೆಪಿಯ ರಾಜ್ಯ ನಾಯಕರಲ್ಲೇ ಆತ್ಮವಿಶ್ವಾಸವಿರಲಿಲ್ಲ. ಹೆಚ್ಚೆಂದರೆ 70 ಕ್ಷೇತ್ರದಲ್ಲಿ ಗೆಲ್ಲಬಹುದು ಎಂಬ ಮನಸ್ಥಿತಿ ಹೊಂದಿದ್ದರು. ಮತ್ತೊಂದೆಡೆ, ಮೋದಿ ಆಗಮನದ ನಂತರವೂ ರಾಜ್ಯದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಹಿಂದಿನ ಲೋಕಸಭೆ ಚುನಾವಣೆ ಅಂತ್ಯಕ್ಕೇ ಮೋದಿ ಅಲೆ ಮಾಯವಾಗಿದೆ ಎಂದೆಲ್ಲ ಕೈ ನಾಯಕರು ವ್ಯಂಗ್ಯವಾಡಿದ್ದರು. ಆದರೀಗ ಮೋದಿ ಅಲೆ ಇಲ್ಲವೆಂದಿದ್ದ ಕಾಂಗ್ರೆಸ್‌ನ ಬಲಾಢ್ಯ ನಾಯಕರುಗಳೇ ಸೋಲುಂಡು ಮೂಲೆ ಸೇರಿದ್ದಾರೆ. ಬಿಜೆಪಿ ಅಸ್ತಿತ್ವವೇ ಇಲ್ಲದ ಜಿಲ್ಲೆಯಲ್ಲೆಲ್ಲ ಕಮಲ ಖಾತೆ ತೆರೆದು ಬೀಗುತ್ತಿದೆ.

**30 ರ್‍ಯಾಲಿಯಲ್ಲಿ ಮೋದಿ ಮೋಡಿ:** ಏಪ್ರಿಲ್ ಅಂತ್ಯದವರೆಗೂ ಬಿಜೆಪಿ ಗೆಲುವು ಅತಂತ್ರವಾಗಿಯೇ ಇತ್ತು. ಮೇ 1ರಿಂದ ಪ್ರಧಾನಿ ನರೇಂದ್ರ ಮೋದಿ ರಾಜ್ಯಕ್ಕೆ ಆಗಮಿಸಿದ್ದು, ಬಿಜೆಪಿಗೆ ವರದಾನವಾಯಿತು. ಮೇ 1ರಿಂದ ಮೇ 8ರವರೆಗೂ 6 ದಿನಗಳು ಮೋದಿ ರಾಜ್ಯಾದ್ಯಂತ ಒಟ್ಟು 30 ಜಿಲ್ಲೆಗಳಲ್ಲಿ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು. ಬಂಗಾರಪೇಟೆ, ಚಿಕ್ಕಮಗಳೂರು, ಬೆಳಗಾವಿ, ಬೀದರ್, ವಿಜಯಪುರ, ಹೊಸಪೇಟೆ, ಕೊಪ್ಪಳ, ಬೆಂಗಳೂರು, ತುಮಕೂರು, ಗದಗ, ಶಿವಮೊಗ್ಗ, ಮಂಗಳೂರು, ಚಾಮರಾಜನಗರ, ಉಡುಪಿ, ಚಿಕ್ಕೋಡಿ, ಯಾದಗಿರಿ, ಬಳ್ಳಾರಿ, ರಾಮನಗರ, ಚಿತ್ರದುರ್ಗ, ರಾಯಚೂರು, ಜಮಖಂಡಿ, ಹುಬ್ಬಳ್ಳಿ, ಬೀದರ್, ಬೆಳಗಾವಿ, ಚಿಕ್ಕಮಗಳೂರಿನಲ್ಲಿ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿದ ಮೋದಿ ಮೋಡಿಯನ್ನೇ ಮಾಡಿದರು. ಮೋದಿ ಅವರ ಕಾರ್ಯಕ್ರಮಕ್ಕೆ ಲಕ್ಷಾಂತರ ಮಂದಿ ಪಾಲ್ಗೊಳ್ಳುವ ಮೂಲಕ ಬಿಜೆಪಿ ಬೆಂಬಲಿಸುವ ಮನಸ್ಸು ಮಾಡಿದರು. ಅಷ್ಟೇ ಅಲ್ಲದೆ ಕಾಂಗ್ರೆಸ್‌ನ ಐದು ವರ್ಷದ ದುರಾಡಳಿತದ ಬಗ್ಗೆ ಮೋದಿ ಪ್ರತಿ ಸಭೆಯಲ್ಲೂ ಉಲ್ಲೇಖಿಸುತ್ತಾ ಸಾಗಿದರು. ಜತೆಗೆ, ಕೇಂದ್ರದಲ್ಲಿ ಯಾವೆಲ್ಲ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ ಎಂಬ ಮಾಹಿತಿಯನ್ನೂ ಬಹಳ ಅಚ್ಚುಕಟ್ಟಾಗಿ ಜನರ ಮನಸ್ಸಿಗೆ ತುಂಬಿದರು. ಮೋದಿ ತೆರಳಿದ ಅಷ್ಟೂ ಜಿಲ್ಲೆಯಲ್ಲೂ ಬಿಜೆಪಿ ಖಾತೆ ತೆರೆದಿದೆ. ಇದು ಮೋದಿ ಅಲೆ ಎನ್ನದೇ ಮತ್ತೇನು? ಎನ್ನುವುದು ಬಿಜೆಪಿ ಅಭಿಪ್ರಾಯ.

ಚುನಾವಣೆಗೆ ಕೇವಲ 15 ದಿನ ಇರುವಾಗ ಇಡೀ ರಾಜ್ಯವನ್ನು ಬಿಜೆಪಿ ಸಭೆ, ಸಮಾರಂಭಗಳಿಂದ ಬ್ಯುಸಿಗೊಳಿಸುವ ಮೂಲಕ ಜನರ ಮನಸ್ಸಿನಲ್ಲಿ ಬಿಜೆಪಿ ಬೇರು ಬಿಡುವಂತೆ ಮಾಡಿದ ಸ್ಟ್ರಾಟರ್ಜಿ ಕೆಲಸ ಮಾಡಿತು.

**ಚಾಣಕ್ಯನ ಕೈಚಳಕ:** ಚಾಣಕ್ಯ ಎಂದೇ ಬಿಂಬಿತಗೊಂಡಿರುವ ಅಮಿತ್ ಶಾ ಅವರ ಸ್ಟ್ರಾಟರ್ಜಿ ಕರ್ನಾಟಕದಲ್ಲೂ ಕೆಲಸ ಮಾಡಿದೆ. ರಾಜ್ಯ ಬಿಜೆಪಿ ನಾಯಕರ ಒಳಜಗಳ, ಭ್ರಷ್ಟಾಚಾರ, ಜೈಲು ಸೇರಿದ್ದು, ರೆಡ್ಡಿ ಬ್ರದರ್ಸ್‌ನ ಲೂಟಿ ಇತ್ಯಾದಿ ವಿಚಾರಗಳು ಬಿಜೆಪಿಯನ್ನು ಧ್ವಂಸ ಮಾಡಿತ್ತು. ಈ ಎಲ್ಲವನ್ನೂ ಅರಿತ ಅಮಿತ್ ಶಾ, ಮೊದಲು ಒಳಜಗಳವಾಗದ ರೀತಿಯಲ್ಲಿ ರಾಜ್ಯ ನಾಯಕರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ರವಾನಿಸಿದರು. ಜನಾರ್ದನ ರೆಡ್ಡಿಯನ್ನು ಯಾವುದೇ ಕಾರಣಕ್ಕೂ ಬಿಜೆಪಿಯಲ್ಲಿ ಗುರುತಿಸಿಕೊಳ್ಳದ ರೀತಿ ಕಟ್ಟಿಹಾಕಲಾಯಿತು. ಮತ್ತೊಂದೆಡೆ ಬೂತ್ ಮಟ್ಟದಲ್ಲಿ ಸಂಘಟನೆ ಬಲಿಷ್ಠಗೊಳಿಸುವಂತೆ ಕಾರ್ಯಕರ್ತರಿಗೆ ಹುಮ್ಮಸ್ಸು ತುಂಬಿದರು. ರಾಜ್ಯ ಬಿಜೆಪಿಯ ಒಂದೊಂದೇ ಹುಳುಕುಗಳನ್ನು ಸರಿಪಡಿಸುತ್ತಾ ಇಡೀ ತಂಡವನ್ನು ಬಲಿಷ್ಠಗೊಳಿಸುವಲ್ಲಿ ಶಾ ಸಫಲವಾದರು. ಮೋದಿ ಹಾಗೂ ಶಾ ಅವರ ಜೋಡಿ ಕರ್ನಾಟಕದಲ್ಲೂ ಕೆಲಸ ಮಾಡಿತು.



### ಕೈ ಹಿಡಿದ ಬಿಜೆಪಿ ಟೀಂ ವರ್ಕ್

**ಪ್ರಧಾನಿ ಮೋದಿ ಒಬ್ಬರೇ ಅಲ್ಲದೆ ಬಿಜೆಪಿ ಬಲಿಷ್ಠ ಟೀಂ ಸಿದ್ಧಪಡಿಸಿಕೊಂಡು ಇಡೀ ರಾಜ್ಯವನ್ನು ಸುತ್ತುವರೆದಿತ್ತು. ಉತ್ತರಪ್ರದೇಶದ ಸಿಎಂ ಯೋಗಿ ಆದಿತ್ಯನಾಥ ಅವರ ಆಗಮನ ಕೂಡ ವರದಾನವಾಯಿತು. ಹಿಂದೂ ಪರ ನಿಲುವು ಇದ್ದವರು ಬಿಜೆಪಿಯತ್ತ ವಾಲಲು ಸಹಕಾರಿಯಾಯಿತು. ಮತ್ತೊಂದೆಡೆ ಕೇಂದ್ರದ ಬಹುತೇಕ ಸಚಿವರುಗಳು ರಾಜ್ಯದಲ್ಲಿಯೇ ಬೀಡು ಬಿಟ್ಟು ಮಾಧ್ಯಮಗೋಷ್ಠಿ, ಸಭೆ, ಸಮಾರಂಭ, ರ್‍ಯಾಲಿ, ರೋಡ್ ಶೋ, ಸಂವಾದಗಳಲ್ಲಿ ಪಾಲ್ಗೊಂಡು ಪ್ರಚಾರ ನಡೆಸಿದರು. ಇಡೀ ದಿನ ರಾಜ್ಯದ ನಾಲ್ಕು ದಿಕ್ಕುಗಳಲ್ಲೂ ಬಿಜೆಪಿಯ ನಾಯಕರು ಸಭೆಗಳನ್ನು ನಡೆಸುತ್ತಿದ್ದರು. ಈ ಎಲ್ಲ ಧನಾತ್ಮಕ ವಿಚಾರಗಳೇ ಬಿಜೆಪಿಯ ಕೈ ಹಿಡಿಯಿತು.**

## ವಿಶ್ಲೇಷಣೆ



**ಕೃಷ್ಣಮೂರ್ತಿ ಹೆಬ್ಬಾರ್**
ಹಿರಿಯ ಪತ್ರಕರ್ತರು

# ರೈತರ ಆತ್ಮಹತ್ಯೆ ವಿಚಾರ ಕಾಂಗ್ರೆಸ್‌ಗೆ ಹಿನ್ನಡೆ

ನಮ್ಮದು ಜನಪರ, ರೈತ ಪರ ಸರಕಾರ ಎಂದು ಬೀಗುತ್ತಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ರೈತರ ಆತ್ಮಹತ್ಯೆಗಳನ್ನು ಹತೋಟಿಗೆ ತರುವಲ್ಲಿ ಎಡವಿರುವುದು 2018ರ ವಿಧಾನಸಭಾ ಚುನಾವಣೆಯ ಜನಾದೇಶದಲ್ಲಿ ಗೋಚರಿಸಿದೆ. 2013ರ ಚುನಾವಣೆಯ ಪ್ರಣಾಳಿಕೆಯಲ್ಲಿ ರೈತರಿಗೆ ಘೋಷಣೆ ಮಾಡಿದ್ದ ಹಲವು ಯೋಜನೆಗಳು ಉತ್ತಮವಾಗಿದ್ದರೂ, ಮಧ್ಯವರ್ತಿಗಳ ಪಾಲಾಗುವುದನ್ನು ತಪ್ಪಿಸಲು ಸರಕಾರ ಹೆಚ್ಚಿನ ಮುತುವರ್ಜಿ ವಹಿಸಬೇಕಿತ್ತು. ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿಯನ್ನು ನಿರ್ಮಿಸಿದ ಹೊಣೆಗಾರಿಕೆ ಯಲ್ಲಿ ಸರಕಾರಗಳ ಪಾತ್ರವೂ ಇರುತ್ತದೆ. ಕೃಷಿಯಿಂದ ರೈತರನ್ನು ವಿಮುಕ್ತಿಗೊಳಿಸಿ, ಕಾರ್ಪೊರೇಟ್ ಕಂಪನಿಗಳಿಗೆ ಮಣೆ ಹಾಕಿದ್ದ ಸಿದ್ದರಾಮಯ್ಯ ಅವರ ತಂತ್ರಗಾರಿಕೆ ಕೈಕೊಟ್ಟಿರುವುದಂತೂ ಸ್ಪಷ್ಟ. ಮಾಜಿ ಮುಖ್ಯಮಂತ್ರಿ ದೇವರಾಜು ಅರಸು ಉಳುವವನೆ ಭೂಮಿಯ ಒಡೆಯ ಎಂದು ಹೇಳಿದ್ದರು. ಸಿದ್ದರಾಮಯ್ಯ ಅವರ ಅಧಿಕಾರದ ಅವಧಿಯಲ್ಲಿ ಮಾರುವವನೇ ಭೂಮಿಯ ಒಡೆಯ ಎಂದಾಗಿತ್ತು. ಶೇ.35 ರಷ್ಟು ರೈತ ಕುಟುಂಬಗಳು ಕೃಷಿಯಿಂದ ವಿಮುಖವಾಗಿವೆ. ಇನ್ನೂ ವಿಮುಖವಾಗುತ್ತಿವೆ. ಈ ಪರಂಪರೆ ಮುಂದುವರಿದರೆ ಭವಿಷ್ಯ ದಿನಗಳು ದೇಶಕ್ಕೆ ಕ್ರೂರವಾಗಿರಲಿವೆ. ಸರಕಾರದ ಕೆಲ ನಿರ್ಧಾರಗಳು ವ್ಯವಸಾಯವನ್ನು ಲಾಭದಾಯಕವಾಗಿಸದೇ ನಷ್ಟಕ್ಕೆ ದೂಡುತ್ತಿದೆ. ಕೃಷಿ ಉತ್ಪಾದನಾ ವೆಚ್ಚ ಹೆಚ್ಚಳ. ಇನ್ನೊಂದೆಡೆ ರೈತರಿಗೆ ಪೂರಕವಾದ, ರೈತಸ್ನೇಹಿ ಮಾರುಕಟ್ಟೆ, ಸಂತೆಗಳು ನಶಿಸಿದ್ದು, ಬೆಳೆ ವಿಮೆ, ಬೆಳೆ ನಷ್ಟ ಪರಿಹಾರ ಸಮರ್ಪಕವಾಗಿ ತಲುಪದೇ ಇರುವುದು ರೈತರ ಸರಣಿ ಆತ್ಮಹತ್ಯೆಗೆ ಕಾರಣಗಳು. ಸರಕಾರ ಈ ಕಾರಣ ತಿಳಿದಿದ್ದರೂ ಸಮಸ್ಯೆ ನಿವಾರಿಸುವ ಗೋಜಿಗೆ ಕೈ ಹಾಕದೇ ಇರುವುದರಿಂದ ಕಾಂಗ್ರೆಸ್‌ಗೆ ರೈತ ಸಮುದಾಯ ಬಿಸಿ ಮುಟ್ಟಿಸಿದೆ. ರಾಜ್ಯದಲ್ಲಿ ಯುವ ಸಮೂಹವನ್ನು ಕಾಡುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಿಸಲು ಕೃಷಿ ಕ್ಷೇತ್ರದಿಂದ ಸಾಧ್ಯ. ಈ ದೃಷ್ಟಿಯಿಂದ ಕೃಷಿ ಕ್ಷೇತ್ರ ಬಲಪಡಿಸುವ ಕೆಲಸ ರಾಜ್ಯ ಸರಕಾರ ಮಾಡಬೇಕಿತ್ತು. ನಿರುದ್ಯೋಗಿ ಯುವಕರನ್ನು ಕೃಷಿಯತ್ತ ಸೆಳೆಯಲು ಹಲವು ಯೋಜನೆಗಳನ್ನು ರೂಪಿಸಬಹುದಿತ್ತು. ಆದರೆ ಸರಕಾರ ರೈತರಿಗಿಂತ ಹೂಡಿಕೆದಾರರು, ತಂತ್ರಜ್ಞಾನಕ್ಕೆ ಆದ್ಯತೆ ನೀಡಿತು. ಇದೇ ಸರಕಾರದ ಪತನಕ್ಕೆ ಕಾರಣವಾಯಿತು.